Strike by the "Samyukta Karnataka" Depositors

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).— ಅಧ್ಯಕ್ಷರೆ, ನಾವು ಏನಾದರೂ ಅರ್ಜೆಂಟ್ ಮ್ಯಾಟರ್ ಇದ್ದರೆ ರೂಲ ೩೧೨ರ ಕೆಳಗೆ ಒಂದು ನೋಟೀಸ್ ಕೊಡುತ್ತೇವೆ. ಅದೇ ಪ್ರಕಾರ ನಾನು ಒಂದು ನೋಟೀಸ್ ಕೊಟ್ಟಿದ್ದು ಅದಕ್ಕೆ ಈವರೆಗೂ ಉತ್ತರ ಇಲ್ಲ. ಸಂಯುಕ್ತ ಕರ್ನಾಟಕದ ಡಿಫಾಸಿಟರ್ಸ್ ಕಳೆದ ೧೩ ದಿವಸಗಳಿಂದ ಆಮರಣ ಉಪವಾಸಕ್ಕೆ ಇಲ್ಲಿ ಕುಳಿತಿದ್ದಾರೆ, ಅವರ ಜೀವ ಗಂಡಾಂತರದಲ್ಲಿ ಇದೆ. ಸಂಯುಕ್ತ ಕರ್ನಾಟಕ ಟ್ರಸ್ಟ್‌ನಲ್ಲಿ ಷೇರ್‌ಹೋಲ್ಡರ್ಸ್ ಸುಮಾರು ೩೦ ಲಕ್ಷ ರೂಪಾಯಿಯಷ್ಟು ಡಿಪಾಸಿಟ್ ಇಟ್ಟಿದ್ದಾರೆ. ಆ ಡಿಪಾಸಿಟ್ ರಿಟರ್ನ್ ಮಾಡಿ ಎಂದರೆ ಮಾಡುತ್ತಿಲ್ಲ. ಆ ಹಣಕ್ಕೆ ಬಡ್ಡಿ ಸಹ ಕೊಡುತ್ತಿಲ್ಲ. ಅದರಲ್ಲಿ ಅನೇಕ ಜನ ಮಧ್ಯಮ ವರ್ಗದವರು, ಮತ್ತು ಕಡುಬಡವರು ಡಿಪಾಸಿಟ್ ಇಟ್ಟಿದ್ದಾರೆ. ಇದು ಉತ್ತರ ಕರ್ನಾಟಕದ ನಾಯಕರು ಕಟ್ಟಿದಂಥದು ಒಂದು ಉತ್ತಮ ಸಂಸ್ಥೆಯಾಗಿತ್ತು. ಆ ಸಂಸ್ಥೆ ಹಿಂದೆ ಕರ್ನಾಟಕ ಪ್ರೈವೇಟ್ ಪ್ರಿಂಟರ್ಸ್ ಲಿಮಿಟೆಡ್ ಅವರಿಗೆ ಟ್ರಾನ್ಸ್‌ಫರ್ ಆಯಿತು. ಈಗ ಜಯಕರ್ನಾಟಕ ಪಬ್ಲಿಕೇಷನ್‌ಗೆ ಹೋಗಿದೆ. ಅವರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈಗ ಮಳ್ಳೂರು ಎನ್ನುವವರ ಜೀವ ಗಂಡಾಂತರದಲ್ಲಿ ಇದೆ. ಅದರ ಬಗ್ಗೆ ರೂಲ್ ೩೧೨ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಕೊಡಲಿಕ್ಕೆ ಇನ್ನು ಎರಡು ಮೂರು ದಿವಸ ತೆಗೆದುಕೊಂಡರೆ ದುರ್ದೈವದಿಂದ ಅವರ ಜೀವಕ್ಕೆ ಏನಾದರೂ ಅಪಾಯ ಬಟ್ಟರೆ ಹೇಗೆ? ಮಾನ್ಯ ಅಧ್ಯಕ್ಷರು, ಎರಡು ಗಂಟೆಗಳ ಕೆಳಗೆ ನೋಟೀಸ್ ಕೊಟ್ಟರೆ ಸಾಕು ಎಂದು ಹೇಳುತ್ತಿದ್ದೀರಿ, ನಾನು ಎರಡು ದಿವಸಗಳ ಹಿಂದೆಯೇ ನೋಟೀಸ್ ಕೊಟ್ಟರೂ ಉತ್ತರ ಬಂದಿಲ್ಲ. ಈಗ ಡಿಪಾಸಿಟ್ ಮಾಡಿರತಕ್ಕವರ ಬಗ್ಗೆ ವಿವರ ಕೊಡುತ್ತೇನೆ. ಅವರು ಯಾವರೀತಿ ಪತ್ರ ವ್ಯವಹಾರ ಮಾಡಿದ್ದಾರೆ ಅದನ್ನು ಕೊಡುತ್ತೇನೆ. It is a matter which has been long debated. ಆಗ ಮೈಸೂರಿನಲ್ಲಿ ಗೋಪಾಲರಾವ್ ಎಕ್ಸೈಜಿನ ಆಯಿತಲ್ಲ ಅದಕ್ಕಿಂತ ದೊಡ್ಡ ಸ್ಕ್ಯಾಂಡಲ್ ಇವರದು. ಇವೊತ್ತು ಉಪವಾಸ ಕುಳಿತಿರುವವರ ಜೀವ ಗಂಡಾಂತರದಲ್ಲಿ ಇದೆ. ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಇದರಲ್ಲಿ ಹಸ್ತಕ್ಷೇಪ ಮಾಡಿ ಕೂಡಲೇ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಕಾನೂನುಬದ್ಧವಾಗಿ ಸರ್ಕಾರ ಕೈಹಾಕಲಿಕ್ಕೆ ಬರುತ್ತದೆ. ಆದುದರಿಂದ ಸರ್ಕಾರ ಅದರ ಬಗ್ಗೆ ಆಲೋಚನೆ ಮಾಡಿದೆಯೆ? ಅದರ ಬಗ್ಗೆ ನನಗೆ ವಿವರ ಬೇಕು. ದಯವಿಟ್ಟು ಅಧ್ಯಕ್ಷರು ಅದಷ್ಟು ಬೇಗ ನನಗೆ ಸರ್ಕಾರದಿಂದ ಉತ್ತರ ಕೊಡಿಸಬೇಕು.

ಅಧ್ಯಕ್ಷರು.— ಸಾಯಂಕಾಲದೊಳಗೆ ನಾನು ಯಾವುದನು ನೋಡಿಸುತ್ತೇನೆ.

Strike by the Autorickshaw Drivers.

ಶ್ರೀ ಸಿ. ಎಂ. ಇಬ್ರಾಹಿಂ.— ಅಧ್ಯಕ್ಷರೆ, ಹಿಂದೆ ಟುಡೇ ಆಪ್ಲೈ, ಟುಮಾರೋ ರಿಪ್ಲೈ ಆಗಿತ್ತು, ಈಗ ಆಪ್ಲೈ, ಆಪ್ಲೈ, ನೋ ರಿಪ್ಲೈ ಆಸ್ಪತ್ರೆ ಹಾಗೆ ಆಗಿದೆ. ಳಿಓ ಜನ ಅಂಗವಿಕಲರು ಕೈ, ಕಾಲುಗಳು ಇಲ್ಲದೆ ಬೀದಿ ಪಾಲಾಗಿದ್ದಾರೆ ಎಂದು ಹಿಂದೆ ನಾನು ಒಂದು ನೋಟೀಸ್ ಕೊಟ್ಟಿದೆ. ಅದು ಹೋದ ಸೆಷನ್‌ನಲ್ಲೂ ಬರಲಿಲ್ಲ. ಈ ಸೆಷನ್‌ನಲ್ಲಿ ಕೊಟ್ಟಿದ್ದು ಅದೂ ಬರಲಿಲ್ಲ. ಇನ್ನು ಇವೊತು ಬೆಳಿಗ್ಗೆಯಿಂದ ಆಟೋರಿಕ್ಷಾ ಸ್ಟೈಕ್ ನಡೆಯುತ್ತಿದ್ದು ಬಹಳ ಆಲ್ಲೋಲಕಲ್ಲೋಲವಾಗಿದೆ, ಆ ಬಗ್ಗೆ ಮಾನ್ಯ ಸಂಚಾರ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟು ಅದರ ಬಗ್ಗೆ ಏನಾಗಿದೆ ಎನ್ನುವುದನ್ನು ಸಭೆಯು ಗಮನಕ್ಕೆ ತರಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್.— ಮಾನ್ಯ ರಾಜಶೇಖರನ್‌ರವರು ಹೇಳಿದಂತೆ ಶೂನ್ಯ ವೇಳೆ ಇರಬೇಕು. ಏಕೆಂದರೆ ಇದ್ದಿದ್ದಿದ್ದಂತೆ ಮುಷ್ಕರಗಳು ಆಗುತ್ತವೆ. ಉದಾಹರಣೆಗೆ ಇವತ್ತು ಆಟೋರಿಕ್ಷಾ ಮುಷ್ಕರ ಆಗಿದೆ. ನಾಳೆ ಬೆಳಿಗ್ಗೆ ಅದು ಮುಂಗಿಯಬಹುದು. ಅದುವರೆಗೆ ಸಾರ್ವಜನಿಕರಿಗೆ ಎಷ್ಟು ತೊಂದರೆ ಗಳಾಗುತ್ತವೆ ಎಂಬುದರ ಬಗ್ಗೆ ನಾವು ಇಲ್ಲಿ ಪ್ರಶ್ನೆ ಹಾಕಬೇಕಾಗುತ್ತದೆ. ಈರೀತಿ ಮುಷ್ಕರಗಳಾದಾಗ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಏನು ಬದಲಿ ವ್ಯವಸ್ಥೆ ಮಾಡುತ್ತೀರಿ? ಹೆಚ್ಚಿಗೆ ಬಸ್‌ಗಳನ್ನು ಹಾಕುತ್ತೀರಾ? ನಿಮ್ಮಲ್ಲಿ ಸಿ.ಐ.ಡಿ. ಇದೆ, ಸಿ.ಐ.ಡಿ. ಇದೆ. ಇವೆಲ್ಲ ಇದ್ದರೂ ಮುಷ್ಕರಗಳಾಗುತ್ತಲೇ ಇರುತ್ತವೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ.

MR. SPEAKER.— I will get it checked up.